**ಸಾಕ್ಷಿಯನ್ನು  ದಿಃ 17.12.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ಮತ್ತು 2 ನೇ  ಪ್ರತಿವಾದಿ ರವರ ಪರ ಶ್ರೀ ಎಂ. ಬಿ. ವಕೀಲರಿಂದಃ–**

ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ,  ವಡಂಬಾಳು ಗ್ರಾಮದ ಸರ್ವೆ ನಂ. 72/3 ರಲ್ಲಿ 11 ಗುಂಟೆ, 72/5 ರಲ್ಲಿ 2 ಎಕರೆ 2 ಗುಂಟೆ, 72/6 ರಲ್ಲಿ 1 ಎಕರೆ, 72/7 ರಲ್ಲಿ 1 ಎಕರೆ 2 ಗುಂಟೆ, 72/8 ರಲ್ಲಿ 24 ಗುಂಟೆ, 72/9 ರಲ್ಲಿ 34 ಗುಂಟೆ, 72/10 ರಲ್ಲಿ 35 ಗುಂಟೆ ಹಾಗೂ ವಾಸದ ಮನೆ, ಖಾಲಿ ಜಾಗ ಮತ್ತು ಬ್ಯಾರನ್ ಮನೆಗಳು ವಿ.ಕೆ ತಿಮ್ಮೇಗೌಡರಿಗೆ ಸೇರಿದ ಸ್ವತ್ತುಗಳು ಎಂದರೆ ಅವರ ತಂದೆಯಿಂದ ಬಂದಂತಹ ಸ್ವತ್ತುಗಳು ಆಗಿವೆ. ಅವರ ಜೀವಿತಾವಧಿಯಲ್ಲಿ ಮೇಲೆ ಹೇಳಿದ ಸ್ವತ್ತುಗಳ ಖಾತೆ ಅವರ ಹೆಸರಿನಲ್ಲಿ ಇತ್ತು ಎಂದರೆ ಅವರ ತಂದೆಯ ಮರಣಾ ನಂತರ ಅವರ ಹೆಸರಿಗೆ ಬಂದಿತ್ತು.  ದಿಃ 29.09.2012 ರಂದು ವಿ.ಕೆ ತಿಮ್ಮೇಗೌಡರು ತಮ್ಮ ಮೂಲಭೂತ ಸೌಕರ್ಯ ಮತ್ತು ಕುಟುಂಬದ ಅವಶ್ಯಕತೆಗಾಗಿ ಮೇಲೆ ಹೇಳಿದ ಸ್ವತ್ತುಗಳನ್ನು ರೂ. 12 ಲಕ್ಷಕ್ಕೆ 1 ನೇ ಪ್ರತಿವಾದಿಗೆ ಕ್ರಯದ ಕರಾರು ಮಾಡಿಕೊಟ್ಟಿದ್ದರು ಎಂದರೆ ಮಾಡಿಕೊಟ್ಟಿರಬಹುದು ಅದರೆ ಅದು ಪಿತ್ರಾರ್ಜಿತ  ಸ್ವತ್ತುಗಳಾಗಿದ್ದು, ಎಲ್ಲರಿಗೂ ಹಕ್ಕಿದೆ. ವಿ.ಕೆ ತಿಮ್ಮೇಗೌಡರಿಗೆ  ಮಕ್ಕಳಿರಲಿಲ್ಲ ಎಂದರೆ ಸರಿ. ವಿ.ಕೆ ತಿಮ್ಮೇಗೌಡ ಕ್ರಯ ಪತ್ರ ಬರೆದುಕೊಡಲಿಲ್ಲ ಎಂಬ ಕಾರಣಕ್ಕಾಗಿ 1 ನೇ ಪ್ರತಿವಾದಿಯೂ ಅವರ ವಿರುದ್ದ ದಿಃ 25.03.2015 ರಂದು ಅಸಲು ದಾವೆ ಸಂಖ್ಯೆ 55/2015 ಅನ್ನು ದಾಖಲಿಸಿದ್ದರು ಎಂದರೆ  ಇರಬಹುದು.

ಸದರಿ ದಾವೆ ದಿಃ 17.11.2015 ರಂದು 1 ನೇ ಪ್ರತಿವಾದಿ ಪರ ಡಿಕ್ರಿ ಆಗಿ ವಿ.ಕೆ ತಿಮ್ಮೇಗೌಡರು ಮೇಲೆ ಹೇಳಿದ ಸ್ವತ್ತುಗಳ ಬಗ್ಗೆ ಕ್ರಯ ಪತ್ರ ಬರೆದುಕೊಡಬೇಕೆಂದು ಆದೇಶವಾಯಿತು ಎಂದರೆ ಗೊತ್ತಿಲ್ಲ. ಕ್ರಯದ ಕರಾರಿನಲ್ಲಿ ಇದ್ದ ಉಳಿಕೆ ರೂ. 4 ಲಕ್ಷವನ್ನು 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಡೆಪಾಜಿಟ್ ಮಾಡಿದರು ಎಂದರೆ ಗೊತ್ತಿಲ್ಲ. ತೀರ್ಪು ಮತ್ತು ಡಿಕ್ರಿಯ ಪ್ರಕಾರ ವಿ.ಕೆ ತಿಮ್ಮೇಗೌಡರು ಕ್ರಯ  ಪತ್ರ ಬರೆದುಕೊಡಲಿಲ್ಲ ಎಂಬ ಕಾರಣಕ್ಕಾಗಿ 1 ನೇ ಪ್ರತಿವಾದಿಯೂ ಅಮಲ್ಜಾರಿ ಕೇಸ್ ನಂ.12/2016 ಅನ್ನು ದಿಃ 18.02.2016 ರಂದು ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ದಿಃ 17.01.2017 ರಂದು ನ್ಯಾಯಾಲಯದ ನಿಯೋಗಿ 1 ನೇ ಪ್ರತಿವಾದಿಗೆ ಕ್ರಯ ಪತ್ರವನ್ನು ನೊಂದಾಯಿಸಿ ಕೊಟ್ಟರು ಎಂದರೆ ಗೊತ್ತಿಲ್ಲ.

ಅಮಲ್ಜಾರಿ ಸಂಖ್ಯೆ 12/2016 ರಲ್ಲಿ ನನ್ನನ್ನು ಸೇರ್ಪಡೆಗೊಳಿಸುವಂತೆ ದಿಃ 12.01.2018 ರಂದು ನಾನು ಅರ್ಜಿ ಸಲ್ಲಿಸಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನಾಗಲಿ, ನನ್ನ ವಕೀಲರಾಗಲಿ ಹಾಜರಾಗದೆ ಇದ್ದ ಕಾರಣ ದಿಃ 27.08.2018 ರಂದು ನನ್ನ ಅರ್ಜಿ ವಜಾಗೊಂಡಿತು ಎಂದರೆ ಸರಿಯಲ್ಲ. ಮೇಲೆ ಹೇಳಿದ ಜಮೀನುಗಳು, ಮನೆ, ಖಾಲಿ ನಿವೇಶನ ಮತ್ತು ಬ್ಯಾರನ್ ಮನೆ ಸ್ವಾಧೀನವನ್ನು ನ್ಯಾಯಾಲಯದ ನಿಯೋಗಿ 1 ನೇ ಪ್ರತಿವಾದಿಗೆ ವಹಿಸಿಕೊಟ್ಟರು ಎಂದರೆ ಸರಿಯಲ್ಲ ನಾವೆ ಸ್ವಾಧೀನದಲ್ಲಿ ಇದ್ದೇವೆ. ದಿಃ 27.08.2018 ರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಿರಾ ಎಂದರೆ ನಮ್ಮ ವಕೀಲರು ಸದರಿ ಆದೇಶದ ಬಗ್ಗೆ ನಮ್ಮ ಗಮನಕ್ಕೆ ತರಲಿಲ್ಲ.

ಅಮಲ್ಜಾರಿ ಪ್ರಕರಣದಲ್ಲಿ 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಡೆಪಾಜಿಟ್ ಮಾಡಿದ್ದ ರೂ. 4 ಲಕ್ಷವನ್ನು ದಿಃ 28.06.2017 ರಂದು ವಿ.ಕೆ ತಿಮ್ಮೇಗೌಡರು ವಾಪಸ್ಸು ಪಡೆದುಕೊಂಡರು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹೆಸರಿಗೆ ಆದ ಕ್ರಯ ಪತ್ರದ ಅಧಾರದ ಮೇಲೆ ಅವರ ಹೆಸರಿಗೆ ಖಾತೆ ಮತ್ತು ಇತರ ಕಂದಾಯ ದಾಖಲೆಗಳು ವರ್ಗಾವಣೆ ಆಗಿವೆ ಎಂದರೆ ಸರಿ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ .ಕ್ರಯ ಪತ್ರದ ಆಧಾರದ ಮೇಲೆ ತನ್ನ ಹೆಸರಿಗೆ ಬಂದಿದ್ದ ಜಮೀನುಗಳ ಪೈಕಿ ಸರ್ವೆ ನಂ, 72/3 ರಲ್ಲಿ 11 ಗುಂಟೆ ಹಾಗೂ 72/5 ರಲ್ಲಿ 2 ಎಕರೆ 2 ಗುಂಟೆಯನ್ನು 1 ನೇ ಪ್ರತಿವಾದಿ ದಿಃ 24.02.2022 ರಂದು 2 ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರ ಮಾಡಿಕೊಟ್ಟರು ಎಂದರೆ ಗೊತ್ತಿಲ್ಲ. ಸದರಿ ದಾನ ಪತ್ರದ ಆಧಾರದ ಮೇಲೆ, ಮೇಲೆ ಹೇಳಿದ ಸ್ವತ್ತುಗಳ ಖಾತೆ ಮತ್ತು ಕಂದಾಯ ದಾಖಲೆಗಳು 2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆಗೊಂಡಿದೆ ಎಂದರೆ ಇರಬಹುದು. ನ್ಯಾಯಾಲಯದ ನಿಯೋಗಿ ಬರೆದುಕೊಟ್ಟ ಕ್ರಯ ಪತ್ರ, 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಬರೆದುಕೊಟ್ಟ ದಾನ ಪತ್ರ ಮತ್ತು ನ್ಯಾಯಾಲಯದ ನಿಯೋಗಿ ವಹಿಸಿಕೊಟ್ಟ ಸ್ವಾಧೀನದ ಪ್ರಕಾರ 1 ನೇ ಪ್ರತಿವಾದಿ ಮೇಲೆ ಹೇಳಿದ ಎಲ್ಲಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ನಾನು, 1 ನೇ ವಾದಿ ಹಾಗೂ 1 ನೇ ವಾದಿಯ ಪತ್ನಿ ಮತ್ತು ಮಕ್ಕಳು 1 ಮತ್ತು 2 ನೇಪ್ರತಿವಾದಿಯರ ಸ್ವಾಧೀಪನುಭವಕ್ಕೆ ತೊಂದರೆ ಕೊಟ್ಟಿದ್ದೇವೆ ಎಂದು ದಿಃ 19.06.2022 ಹುಣಸೂರು ಗ್ರಾಮಾಂತರ ಠಾಣೆಗೆ ದೂರು ಕೊಟ್ಟಿದ್ದಾರೆ ಎಂದರೆ ದೂರು ಕೊಟ್ಟಿರುವುದು ನಿಜವಾಗಿದೆ ಆದರೆ ಅದರಲ್ಲಿ ನಿಜಾಂಶ ಇಲ್ಲ ಎಂದು ಬಿ. ಅಂತಿಮ ವರದಿ ಸಲ್ಲಿಸಿದ್ದಾರೆ. ನಾನು ಪದೇ ಪದೇ 1 ಮತ್ತು 2 ನೇ ಪ್ರತಿವಾದಿಯರ ಸ್ವಾಧೀನಾನುಭವಕ್ಕೆ ತೊಂದರೆ ಕೊಡುತ್ತಿದ್ದವೆ ಎಂದು ಅವರು

ನಮ್ಮ ವಿರುದ್ಧ ದಿಃ 16.08.2022 ರಂದು ಇದೆ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 155/2022 ಅನ್ನು ದಾಖಲಿಸಿದ್ದಾರೆ ಎಂದರೆ ಸರಿ, ಸುಳ್ಳು ದಾವೆ ಸಲ್ಲಿಸಿದ್ದಾರೆ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯೂ ನಮ್ಮ ವಿರುದ್ಧ ಪ್ರತಿಭಂದಕಾಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಇರಬಹುದು. ಸದರಿ ಅರ್ಜಿಯಲ್ಲಿ ನ್ಯಾಯಾಲಯವು ಎರಡೂ ಪಕ್ಷಗಾರರು ದಾವಾ ಸ್ವತ್ತಿನ ಬಗ್ಗೆ ಯಥಾಸ್ಥಿತಿ ಕಾಪಾಡಬೇಕೆಂದು ಆದೇಶ ಮಾಡಿದೆ ಎಂದರೆ ಸರಿ.

ಸರ್ವೆ ನಂ. 72/1 ರಲ್ಲಿ 4 ಗುಂಟೆ, 72/2 ರಲ್ಲಿ 23 ಗುಂಟೆ, 72/4 ರಲ್ಲಿ 24 ಗುಂಟೆ, 74/2 ರಲ್ಲಿ 2 ಎಕರೆ 5 ಗುಂಟೆ, 45/1 ರಲ್ಲಿ 33 ಗುಂಟೆ, 45/2 ರಲ್ಲಿ 9 ಗುಂಟೆ, 45/3 ರಲ್ಲಿ 20 ಗುಂಟೆಯನ್ನು ಈ ದಾವೆಯಲ್ಲಿ ನಾವು ಸೇರಿಸಿಲ್ಲ ಎಂದರೆ ಅದು ನನ್ನ ತಂದೆಯ ಸ್ವಯಾರ್ಜಿತವಾಗಿದೆ. ಆ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದು ತೋರಿಸಲು ದಾಖಲೆಯನ್ನು ಬೇಕಾದರೆ ಹಾಜರು ಪಡಿಸುತ್ತೇನೆ. ದಿಃ 13.01.1977 ರಂದು ವಿ.ಕೆ. ತಿಮ್ಮೇಗೌಡರು ಪುಟ್ಟಶಟ್ಟರ ಪತ್ನಿ ಪುಟ್ಟಲಕ್ಷ್ಮಮ್ಮ ರವರಿಂದ ಸರ್ವೆ ನಂ. 72/6 ರಲ್ಲಿ 1 ಎಕರೆ 1 ಗುಂಟೆಯನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ, ಅದಲು ಬದಲು ಮಾಡಿಕೊಂಡಿದ್ದಾರೆ. ಆ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದಿರಾ ಎಂದರೆ ಇಲ್ಲ. ಸದರಿ ಕ್ರಯ ಪತ್ರದಲ್ಲಿ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ವಿ.ಕೆ. ತಿಮ್ಮೇಗೌಡರ ಜಮೀನು ಎಂದು ಬರೆದಿದ್ದಾರೆ ಎಂದರೆ ಅದಲು ಬದಲು ಮಾಡಿಕೊಂಡಿದ್ದರಿಂದ ಆ ರೀತಿ ಬರೆದಿದ್ದಾರೆ. ಅದಲು ಬದಲು ಮಾಡಿಕೊಂಡಿದ್ದಾರೆ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ಅಸಲು ದಾವೆ ಸಂಖ್ಯೆ 55/2015 ರಲ್ಲಿ ದಿಃ 17.11.2015 ರಂದು ಆದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಿರಾ ಎಂದರೆ ಸಲ್ಲಿಸಿದ್ದೇವೆ. 1 ನೇ ಪ್ರತಿವಾದಿ ರೂ. 72,125/- ನ್ಯಾಯಾಲಯ ಶುಲ್ಕ ಪಾವತಿ ದಾವೆ ಹೂಡಿದ್ದು, ನೀವು ಅಷ್ಟೆ ಶುಲ್ಕವನ್ನು ಪಾವತಿಸಿ ಮೇಲ್ಮನವಿ ಸಲ್ಲಿಸಿದ್ದಿರಾ ಎಂದರೆ ವಕೀಲರು ಹೇಳಿದರೆ ಪಾವತಿಸುತ್ತೇನೆ. 1 ನೇ ಪ್ರತಿವಾದಿಯ ಹೆಸರಿಗೆ ಅದ ಜಮೀನುಗಳು, ಮನೆಗಳು, ನಿವೇಶನಗಳು ಮತ್ತು ಬ್ಯಾರನ್ ಮನೆಗಳಲ್ಲಿ ನಮಗೆ ಯಾವುದೆ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ ಪಿತ್ರಾರ್ಜಿತ ಆಗಿದೆ. ದಿಃ 19.11.2017 ರಂದು ವಿ.ಕೆ ತಿಮ್ಮೇಗೌಡರು ತೀರಿ ಹೋಗಿದ್ದು, ಅವರ ಜೀವಿತಾವಧಿಯಲ್ಲಿ ನಾವು ಭಾಗ ಕೋರಿ ಯಾವುದೆ ದಾವೆಯನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ, ಅಸಲು ದಾವೆ ಸಂಖ್ಯೆ 339/2012 ಅನ್ನು ದಾಖಲಿಸಿದ್ದೇವೆ. ಸದರಿ ದಾವೆ ವಿಚಾರಣೆ ನಡೆಯುತ್ತಿದೆ. ಸದರಿ ದಾವೆಯನ್ನು ಭಾಗಾಂಶ ಕೋರಿ

ಸಲ್ಲಿಸಿದ್ದಿರಾ ಎಂದರೆ ನಮ್ಮನ್ನು ಸೇರಿಸಿ ಸಾವಿತ್ರಮ್ಮ ದಾವೆ ಹಾಕಿದ್ದಾರೆ.  ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ 1 ದಾವೆಯನ್ನು ಹಾಕಿ 1 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಅದೆ ಆಸ್ತಿಗಳ ಬಗ್ಗೆ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 1 ಮತ್ತು 2 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ, ಮುಂದೆ ಮಾಡುತ್ತೇವೆ.  ಸದರಿ ದಾವೆ 2012 ರಿಂದ ಬಾಕಿ ಇದೆ. ದಿಃ 12.01.2018 ರಂದು  ನಿಮ್ಮ ಗಮನಕ್ಕೆ ಬಂದಾಗ 1 ಮತ್ತು 2 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಸೇರಿಸಲು ಪ್ರಯತ್ನಿಸಿದ್ದಿರಾ ಎಂದರೆ ಬೇರೆ ದಾವೆ ಹಾಕಿದ್ದೇವು. 1 ಮತ್ತು 2 ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂದು ಪದೆ ಪದೆ ದಾವೆ ಹಾಕುತ್ತಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 4 ರಿಂದ 8 ನೇ ಪ್ರತಿವಾದಿಯ ಪರ ಶ್ರೀ ಎಂ.ಪಿ ವಕೀಲರಿಂದಃ**

4 ರಿಂದ 8 ನೇ ಪ್ರತಿವಾದಿಯನ್ನು ಹಾಗೂ ಅವರ ವಕೀಲರನ್ನು ಕರೆಯಲಾಗಿ ಗೈರು ಹಾಜರಿ, ಪ್ರತಿವಾದ ಪತ್ರ ಸಲ್ಲಿಸಿಲ್ಲ, ಅದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರಃ**

3 ನೇ ಪ್ರತಿವಾದಿ ಏಕಿಪಕ್ಷಿಯರಾಗಿದ್ದು, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.